# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಿತ್ತೂರ.

ದಿನಾಂಕಃ 06.06.2026 ರಂದು ಅರ್ಜಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಅವರು ತಮ್ಮ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅವರನ್ನು ಪಿ.ಡಬ್ಲ್ಯೂ-1 ಎಂದು ಮುಖ್ಯ ವಿಚಾರಣೆಯಲ್ಲಿ ಪರಿಗಣಿಸಲು ಕೋರಿದ್ದು ಅವರ ಕೋರಿಕೆಯನ್ನು ಮನ್ನಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ ಬಿ ಕೆ ಎಸ್ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಹಾಗೂ ಅದರಲ್ಲಿರುವ ಎಲ್ಲಾ ಅಂಶಗಳನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಹಾಗೂ ಅದು ಸತ್ಯದಿಂದ ಕೂಡಿರುತ್ತದೆ.

1. ಎದುರುದಾರರು ನೀಡಿದ ಅಲಭ್ಯ ಪ್ರಮಾಣಪತ್ರವನ್ನು ನಿಪಿ-1 ಎಂದು,
2. ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ-2 ಎಂದು,
3. 2 ನೋಟರೈಜಡ್ ಆಧಾರ ಕಾರ್ಡಗಳನ್ನು ನಿಪಿ-3 ಮತ್ತು 4 ಎಂದು,
4. 1 ಪತ್ರಿಕಾ ಪ್ರಕಟಣೆಯನ್ನು ನಿಪಿ-5 ಎಂದು ಕ್ರಮವಾಗಿ ನಿಶಾನೆಗಳಾಗಿ ಗುರುತಿಸಲಾಯಿತು.

(ನಿಪಿ-3 ಮತ್ತು 4 ನ್ನು ಮೂಲ ಪ್ರತಿಯ ಜೊತೆ ಹೋಲಿಸಿ ನೋಡಿ ಹಿಂದಿರುಗಿಸಲಾಯಿತು.)

ಆದುದರಿಂದ ಅರ್ಜಿಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ- ಎದುರುದಾರ ಪರಃ ಶ್ರೀ ಎ ಬಿ ಎಲ್ ವಕೀಲರಿಂದಃ**

ನಾನು ಉದ್ದೇಶಪೂರ್ವಕವಾಗಿ ನನ್ನ ತಾಯಿಯ ಮರಣವನ್ನು ಎದುರುದಾರರೊಂದಿಗೆ ನೋಂದಣಿ ಮಾಡಿಸಿಲ್ಲ ಎಂದರೆ ಸರಿಯಲ್ಲ. ನೋಂದಣಿ ಮಾಡಿಸಲು ನನಗೆ ಎಲ್ಲಾ ಜ್ಞಾನ ಇದ್ದರೂ ಸಹ ಉದ್ದೇಶಪೂರ್ವಕವಾಗಿ ನೋಂದಣಿ ಮಾಡಿಸಿಲ್ಲ ಆದ್ದರಿಂದ ಅರ್ಜಿಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಪಕ್ಷದಾರರನ್ನು ಪಾರ್ಟೀ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕಿತ್ತೂರ.